(ಇಂದು ದಿನಾಂಕಃ 31-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಸಿ. ಎಸ್. ವಕೀಲರಿಂದ (ಅರ್ಜಿದಾರರ ಪರ)**

1. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಂತಹ ವಿಷಯಗಳು ಸರಿಯಾಗಿವೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

- ದಿಃ 18-09-2019 ರಂದು ನಾನು ನೀಡಿರುವ ಪುರವಣಿ ಹೇಳಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-12 ಎಂದು, ಗುರುತಿಸಲಾಯಿತು.

ಅದರಂತೆ ನನ್ನ ಅರ್ಜಿಯಲ್ಲಿ ಕೋರಿರುವಂತೆ ಅವಾರ್ಡ ಮಾಡಲು ವಿನಂತಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಎದುರುದಾರ ಪರ ವಕೀಲರು ಶ್ರೀ.ವಿಬಿ.ಸಿಃ**

1. ನಿ.ಪಿ-12 ರ ಹೇಳಿಕೆಯನ್ನು ಅಪಘಾತವಾದ ಅಂದಾಜು 2 ತಿಂಗಳು 10 ದಿನಗಳ ನಂತರ ನಾನು ಕೊಟ್ಟಿರುತ್ತೇನೆ. ಹೇಳಿಕೆ ಕೊಡಲು ನಾನು ಒಬ್ಬನೆ ಹೊಗಿದ್ದೆ ಸಾಕ್ಷಿ ಮುಂದುವರೆದು ಅಲ್ಲಿ ಬೆರೆಯವರು ಇದ್ದರು ಎಂದು ಹೇಳುತ್ತಾರೆ. ಅಲ್ಲಿ ವಸಂತ ತಂದೆ ಕರಬಸಪ್ಪ, ಜಗ್ದು ಬೇರನಹಳ್ಳಿ, ಶಿವಕುಮಾರ ಸ್ವಾಮಿ, ನಾಗಪ್ಪ ಸರ್, ಶಾಂತವೀರ, ಮೊಹಮ್ಮದ ಇಸ್ಮಾಯಿಲ ಮಶಾಕ ಇದ್ದರು. ನನ್ನ ಮಗನ ಜೊತೆ ಅಪಘಾತವಾದಾಗ ರಾಜು ಎಂಬುವವರು ಇದ್ದರು. ನಾನು ಹೇಳಿಕೆ ಕೊಡುವಾಗ ಈ ಮೇಲೆ ಹೇಳಿದ ವ್ಯಕ್ತಿಗಳು ಇದ್ದರು. ರಾಜಕುಮಾರ ರವರ ಕಡೆಯವರು ಯಾರು ಇರಲಿಲ್ಲ. ಗಾಡಿಯನ್ನು ಮತ್ತು ಗಾಡಿಯ ಚಾಲಕನನ್ನು ಈ ಮೇಲೆ ಹೇಳಿರುವ ವ್ಯಕ್ತಿಗಳ ಸಮಕ್ಷಮದಲ್ಲಿ ನಾನು ಗುರುತಿಸಿರುತ್ತೇನೆ ಎಂದು ನಿ.ಪಿ-12 ರಲ್ಲಿ ಬರೆದಿಲ್ಲ ಎಂದರೆ ಸಾಕ್ಷಿ ಅವರು

ಬರೆದಿರುತ್ತಾರೆ ಎಂದು ಹೇಳುತ್ತಾರೆ. ನಿ.ಪಿ.-12 ಪ್ರಕಾರ ನಾನು ಹೇಳಿಕೆ ಕೊಡುವಾಗ ಸಿ.ಪಿ.ಐ ಚಿಂಚೋಳಿ ರವರಿಗೆ ಇದೆ ಗಾಡಿ ಅಪಘಾತ ಪಡಿಸಿದೆ ಎಂದು ವಸಂತ ರವರು ಹೇಳಿರುತ್ತಾರೆ. ವಸಂತ ರವರು ಹೇಳಿರುವ ಆಧಾರದ ಮೇಲೆ ನಾನು ಮೊದಲು ದೂರು ಕೊಟ್ಟಿರುತ್ತೇನೆ ಎಂದರೆ ಸರಿ. ದೂರಿನಲ್ಲಿ ವಸಂತ ರವರು ಯಾವುದೊ ಒಂದು ಅಪರಿಚಿತ ವಾಹನ ಡಿಕ್ಕಿ ಪಡಿಸಿ ಮೃತ ಪಟ್ಟ ಬಗ್ಗೆ ದೂರು ಕೊಟ್ಟಿರುತ್ತೇನೆ ಎಂದು ಬರೆದಿದೆ ಎಂದರೆ ಸರಿ. ನಿ.ಪಿ.-12 ರಲ್ಲಿ ವಸಂತ ರವರು ಬಂದು ಗಾಡಿಯನ್ನು ಗುರುತಿಸಿರುತ್ತಾರೆ ಎಂದು ಎಲ್ಲಿಯೂ ಬರೆದಿಲ್ಲ ಎಂದರೆ ಸಾಕ್ಷಿ ವಸಂತ ರವರು ಹೇಳಿರುತ್ತಾರೆ ಎಂದು ಹೇಳುತ್ತಾರೆ. ನಿ.ಪಿ-12 ನ್ನು ಹೋರತುಪಡಿಸಿ ಈ ಮೇಲೆ ಹೇಳಿದ ವ್ಯಕ್ತಿಗಳ ಹೇಳಿಕೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ನಿ.ಪಿ.-12 ರ ಪ್ರಕಾರ ಪೊಲೀಸರು ನನಗೆ ಗಾಡಿ ಮತ್ತು ಚಾಲಕನನ್ನು ತೊರಿಸಿದ್ದು, ನಾನು ಆ ಪ್ರಕಾರ ಹೇಳಿಕೆ ಕೊಟ್ಟಿರುತ್ತೆನೆ ಎಂದು ಬರೆದಿದೆ ಎಂದರೆ ಸರಿ. ಲಾರಿ ಸಂಖ್ಯೆ.AP 28 TB 6064 ವಾಹನದಿಂದ ಅಪಘಾತವಾಗಿದೆ ಎಂದು ನಾನು ಮತ್ತು ಗಾಡಿಯ ಮಾಲಿಕರು, ಚಾಲಕ ಮತ್ತು ಪೊಲಿಸರು ಸೇರಿಕೊಂಡು ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿರುತ್ತೆವೆ ಎಂದರೆ ಸರಿಯಲ್ಲ. ವಾಹನ ಸಂಖ್ಯೆ.AP 28 TB 6064 ರ ಚಾಲಕ ಮಶಾಕ ರವರು ಪೋಲಕಪಳ್ಳಿ ಗ್ರಾಮದವರು ಎಂದರೆ ಸರಿ. ಮಶಾಕ ರವರು ನನಗೆ ಪರಿಚಯ ಎಂದರೆ ಸರಿಯಲ್ಲ. ನನಗೆ ಗಜೇಂದ್ರ ತಂದೆ ವೀರಶೆಟ್ಟಿ ನನಗೆ ಪರಿಚಯ ಇಲ್ಲ. ಪೊಲೀಸರು ಅಂತಿಮ ವರದಿಯಲ್ಲಿ ಗಾಡಿಯನ್ನು ಎಲ್ಲಿ ಹಿಡಿದರು ಮತ್ತು ಯಾರ ಹೇಳಿಕೆಯ ಆಧಾರದ ಮೇಲೆ ಹಿಡಿದರು ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ನಿ.ಪಿ-12

ರ ಹೇಳಿಕೆಯನ್ನು ನಾನು ಕೊಡಲು ಪೊಲೀಸ ಠಾಣೆಯಲ್ಲಿ ಲಾರಿ ಇತ್ತು. ಲಾರಿಗೆ ಯಾವುದೇ ಜಖಂ ಆಗಿರಲಿಲ್ಲ. ವಾಹನ ಸಂಖ್ಯೆ.AP 28 TB 6064 ದಿಂದ ನನ್ನ ಮಗನಿಗೆ ಯಾವುದೇ ಅಪಘಾತ ಆಗಿರಲಿಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ 70 ದಿನಗಳ ನಂತರ ಸುಳ್ಳು ವಾಹನ ಸಂಖ್ಯೆಯನ್ನು ಸೇರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.